

ತೂಕ ಮತ್ತು ಅಳತೆಯ ವಿವಿಧ ಸಾಧನಗಳು

# ತುಲಾ ಭವನ

## ತೂಕ, ಅಳತೆಗಳ ಅಪೂರ್ವ ಜಗತ್ತು

**ದಾವಣಗೆರೆಯ ಬಸವರಾಜ್ ರೂಪಿಸಿರುವ ‘ತುಲಾ ಭವನ’ ದೇಶದಲ್ಲೇ ವಿಶಿಷ್ಟವಾದ ವಸ್ತುಸಂಗ್ರಹಾಲಯ. ಕನ್ನಡನಾಡಿನ ವಿವಿಧ ರಾಜವಂಶಗಳು ಬಳಸುತ್ತಿದ್ದ ತೂಕದ ಮಾಪನಗಳನ್ನು ಸಂಗ್ರಹಿಸಿರುವ ಬಸವರಾಜ್, ತೂಕದ ಅಳತೆ ಮಾಪನಗಳ ಮೂಲಕ ಇತಿಹಾಸ ರಚಿಸಬಹುದಾದ ಭಿನ್ನ ಮಾದರಿಯೊಂದನ್ನು ನಮ್ಮ ಮುಂದಿಟ್ಟಿದ್ದಾರೆ.**

■ ಸುಮಾ ಬಿ.
ಚಿತ್ರಗಳು: ಸತೀಶ್ ಬಡಿಗೇರ

ತುಂಗಭದ್ರಾ ನದಿ ದಡದ ವಿಶಾಲ ಪ್ರದೇಶದಲ್ಲಿ ಹರಡಿಕೊಂಡಿದ್ದ ‘ವಿಜಯನಗರ ಸಾಮ್ರಾಜ್ಯ’ ಕರುನಾಡಿನ ಸಿರಿವಂತ ರಾಜಮನೆತನಗಳ ಪಟ್ಟಿಯಲ್ಲಿ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ‘ವಿಜಯನಗರ ಸಾಮ್ರಾಜ್ಯದ ರಸ್ತೆಗಳ ಇಕ್ಕೆಲಗಳಲ್ಲಿ ಚಿನ್ನ, ಬೆಳ್ಳಿ, ವಜ್ರಗಳನ್ನು ಮಾರಲಾಗುತ್ತಿತ್ತು’ ಎಂದು ಅಂದಿನ ಇತಿಹಾಸಕಾರರು ತಮ್ಮ ಪುಸ್ತಕಗಳಲ್ಲಿ ದಾಖಲಿಸಿದ್ದಾರೆ. ಆ ಸಾಮ್ರಾಜ್ಯದ ಐಶ್ವರ್ಯ, ಸಂಪತ್ತು ಸಾರಲು ಇದೊಂದು ಮಾತು ಸಾಕಲ್ಲವೇ?

ಗತವೈಭವದಲ್ಲಿ ‘ಮರೆತುಹೋದ ಸಾಮ್ರಾಜ್ಯ’ದ ನೆನಪು ಈಗೇಕೆ ಎಂದಿರಾ? ಕಾರಣವುಂಟು. ಆಗ ಬೆಳ್ಳಿ, ಬಂಗಾರ ತೂಗಲು ಬಳಸುತ್ತಿದ್ದ ಮಾಪನ ಯಾವುದು? ಈಗಿನಂತೆ ಗ್ರಾಂ, ಕೆ.ಜಿ.ಗಳಂತೆ ನಿರ್ದಿಷ್ಟ ಮಾಪನಗಳಿರಲಿಲ್ಲವಲ್ಲವೇ? ಹೀಗೊಂದು ಪ್ರಶ್ನೆ ಏಳುತ್ತದೆ. ಈ ಪ್ರಶ್ನೆಗೆ ‘ಗದ್ಯಾಣ’ ಎಂಬ ಉತ್ತರ ಕಂಡುಕೊಂಡಿದ್ದಾರೆ ದಾವಣಗೆರೆಯ ತೂಕ ಮತ್ತು ಅಳತೆ ಮಾಪನಗಳ ಸಂಗ್ರಾಹಕ, ‘ತುಲಾ ಭವನ’ ವಸ್ತುಸಂಗ್ರಹಾಲಯದ ರೂವಾರಿ ಬಸವರಾಜ್ ಯಳಮಲ್ಲಿ.

14ರಿಂದ 16ನೇ ಶತಮಾನದವರೆಗೆ ಕರುನಾಡನ್ನು ಆಳಿದ ವಿಜಯನಗರ ಅರಸರ ಕಾಲಮಾನ ವೈಭವೋಪೇತವಾಗಿತ್ತು. ಅಲ್ಲಿ ‘ವರಾಹ’, ‘ಗದ್ಯಾಣ’ ಎಂಬ ಚಿನ್ನದ ನಾಣ್ಯಗಳು ಚಾಲನೆಯಲ್ಲಿದ್ದವು ಎಂಬ ಅಂಶಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದರೆ, ತೂಕಕ್ಕೆ ಇಂಥದ್ದೇ ಮಾಪನ ಬಳಸುತ್ತಿದ್ದರು ಎಂಬ ದಾಖಲೆ ಸಿಗುವುದು ದುರ್ಲಭ. ತೂಕ ಮತ್ತು ಅಳತೆಯ ಮಾಪನಗಳ ಬಗ್ಗೆ 20 ವರ್ಷಗಳಿಂದಲೂ ವಿಶೇಷ ಆಸಕ್ತಿ ಹೊಂದಿ ಅದರ ಅಧ್ಯಯನದಲ್ಲೇ ತೊಡಗಿರುವ ಬಸವರಾಜ ಯಳಮಲ್ಲಿ ಅವರು ‘ಗದ್ಯಾಣ’ ಎಂಬ ತೂಕದ ಕಲ್ಲುಗಳಿಂದಲೇ (ತೂಕದ ಬಟ್ಟುಗಳು) ಅಂದು ಬಂಗಾರ, ಬೆಳ್ಳಿ, ವಜ್ರಗಳನ್ನು ತೂಗಲಾಗುತ್ತಿತ್ತು ಎಂದು ದೃಢವಾಗಿ ಹೇಳುತ್ತಾರೆ.

ಹಿತ್ತಾಳೆಯ ಮಿಶ್ರಲೋಹದ ಸಾವಿರ ತೊಲಗಳನ್ನು ತೂಗುವ ಬಟ್ಟು



‘ವಿಜಯನಗರ ಅರಸರ ಆಳ್ವಿಕೆ ಕಾಲದಲ್ಲಿ ಬಳಸುತ್ತಿದ್ದ ಒಂದು ಚಿನ್ನದ ನಾಣ್ಯ 52 ಗ್ರೇನ್ ತೂಗುತ್ತದೆ. ಅದು ಈಗಿನ 3.375 ಗ್ರಾಂಗೆ ಸಮ. ಇಂತಹ ಹಲವು ನಾಣ್ಯಗಳನ್ನು ಒಟ್ಟುಗೂಡಿಸಿ ಒಂದು ತೂಕದ ಕಲ್ಲುಗಳನ್ನು ಬಳಸುತ್ತಿದ್ದರು. ಆ ಕಲ್ಲುಗಳ ಮೇಲೆ ‘ಗ 2’, ‘ಗ 5’, ‘ಗ 19’, ‘ಗ 12’, ‘ಗ 30’ ಹೀಗೆ ಮುದ್ರಿಸಲಾಗಿದೆ. ಇಲ್ಲಿ ‘ಗ’ ಎಂದರೆ ‘ಗದ್ಯಾಣ’ ಹಾಗೂ ಸಂಖ್ಯೆಗಳು ಆ ಕಲ್ಲಿನ ತೂಕವನ್ನು ಸೂಚಿಸುತ್ತವೆ’ ಎನ್ನುವ ಲೆಕ್ಕಾಚಾರ ಬಿಡಿಸಿಡುತ್ತಾರೆ ಯಳಮಲ್ಲಿ.

ಆ ಸಾಮ್ರಾಜ್ಯದ ಆಳ್ವಿಕೆ ಕಾಲದಲ್ಲಿ ಬಳಸುತ್ತಿದ್ದ 40 ಬಗೆಯ ವಿವಿಧ ತೂಕದ ‘ಗದ್ಯಾಣ’ಗಳು ಇವರ ಸಂಗ್ರಹದಲ್ಲಿವೆ. ವಿಜಯನಗರ ಅರಸರ ಕಾಲದ ಶಾಸನಗಳಲ್ಲಿನ ದಾಖಲೆಗಳು, ಆ ಸಾಮ್ರಾಜ್ಯದ ಕುರಿತ ಪುಸ್ತಕಗಳು, ಅಂದು ಬಳಸುತ್ತಿದ್ದ ಅಚ್ಚುಗಳು, ಸಂಜ್ಞೆಗಳು, ತೂಕದ ಕಲ್ಲುಗಳು ಸಿಕ್ಕ ಪ್ರದೇಶ ಇವುಗಳನ್ನು ಆಧರಿಸಿ ‘ಗದ್ಯಾಣ’ ಎಂಬ ತೂಕದ ಕಲ್ಲುಗಳು ಬಳಕೆಯಲ್ಲಿದ್ದವು. ಅವುಗಳನ್ನು ಹಿತ್ತಾಳೆ, ತಾಮ್ರದ ಮಿಶ್ರಲೋಹದಿಂದ ತಯಾರಿಸಲಾಗಿತ್ತು ಎನ್ನುವುದನ್ನು ದೃಢೀಕರಿಸುತ್ತಾರೆ ಅವರು.

ವಿಜಯನಗರವನ್ನು ಹಿಂದೂ ಅರಸರು ಆಳುತ್ತಿದ್ದಾಗಲೇ ಮಗ್ಗುಲಲ್ಲಿ ಬಹಮನಿ ಸುಲ್ತಾನರು ಆಳ್ವಿಕೆ ನಡೆಸುತ್ತಿದ್ದರು. ಕಲಬುರಗಿ, ವಿಜಯಪುರ, ಬೀದರ್‌ಗಳಲ್ಲಿ ಆದಿಲ್‌ಷಾಹಿ, ಕುತುಬ್‌ಷಾಹಿಗಳು ಸಾಮ್ರಾಜ್ಯ ವಿಸ್ತರಿಸುತ್ತಿದ್ದರು.